# ಕೊರೊನಾ ವೈರಸ್ ಹಿನ್ನೆಲೆ: ಸವಿತಾ ಸಮಾಜದವರಿಗೆ ಅಕ್ಕಿ, ಗೋಧಿ, ಅಡುಗೆ ಎಣ್ಣೆ ಮತ್ತು ಬೇಳೆ ವಿತರಣೆ

**ಚಿತ್ರದುರ್ಗ ಏ. 4.** ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರಾದ ಸನ್ಮಾನ್ಯ ಶ್ರೀ ವಜುಭಾಯಿ ವಾಲಾ ಹಾಗು ಸನ್ಮಾನ್ಯ ಮುಖ್ಯಮಂತ್ರಿಗಳವರು ಚಿತ್ರದುರ್ಗ ಮುರುಘರಾಜೇಂದ್ರ ಮಠದ ಡಾ. ಶಿವಮೂರ್ತಿ ಮುರುಘಾ ಶರಣರಿಗೆ ಫೋನ್ ಕರೆಮಾಡಿ ಮಾತನಾಡಿ ಜಿಲ್ಲೆಯಲ್ಲಿರುವ ಬಡವರಿಗೆ ಹಾಗೂ ಬಡಕಾರ್ಮಿಕರಿಗೆ ಶ್ರೀಮಠದಿಂದ ದವಸ ಧಾನ್ಯಗಳನ್ನು ವಿತರಿಸುವಂತೆ ಚರ್ಚಿಸಿದ್ದು ಹಾಗು ಯಾರೂ ಸಹ ಅನ್ನ ಆಹಾರ ಸಮಸ್ಯೆಯಿಂದ ಬಳಲಬಾರದು ಎಂಬ ಅವರ ಒತ್ತಾಸೆಯಂತೆ ಇಂದು ಸವಿತಾ ಸಮಾಜದವರಿಗೆ ಅಕ್ಕಿ, ಗೋಧಿ, ಅಡುಗೆ ಎಣ್ಣೆ ಮತ್ತು ಬೇಳೆಯನ್ನು ಡಾ. ಶಿವಮೂರ್ತಿ ಮುರುಘಾ ಶರಣರು ವಿತರಿಸಿದರು.



ಈ ಸಂದರ್ಭದಲ್ಲಿ ಸವಿತಾ ಸಮಾಜದ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಹನುಮಂತಪ್ಪ, ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷ ವರದರಾಜ್, ಶ್ಯಾಮ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ ಮುಂತಾದವರಿದ್ದರು.


ಶ್ರೀ ಗುರುಬಸವಲಿಂಗಾಯ ನಮಃ
ಶಿವಮೂರ್ತಿ
ವೈರಸ್
ವಿತರಣೆ


ಶ್ರೀ ಗುರುಬಸವಲಿಂಗಾಯ ನಮಃ
ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ
ಶಿವಮೂರ್ತಿ ಮುರುಘಾ ಶರಣರು
ಹಿನ್ನಲೆಯಲ್ಲಿ ಬಡವರಿಗೆ
ದವಸ-ಧಾನ್ಯ ವಿತರಣೆ
ಸ್ಥಳ: ಮುರುಘಾಮಠ,ಚಿತ್ರದುರ್ಗ